ಶ್ರೀ ಕೆ. ಯಂಕಟಪ್ಪ.—ಹಾರೇಗೊಪ್ಪ, ಕಂನ್ಕೂರು, ಜೋರುಡಿ, ಶಿಕಾರಿಪುರ ರಸ್ತೆ ಬಹಳ ಮಹತ್ವವಾದದ್ದು ಎಂದು ತಮ್ಮ ಗಮನಕ್ಕೆ ತಂದಿದ್ದೇವೆ. ತಾವು ಹಣದ ಪರಿಸ್ಥಿತಿ ನೋಡಿ ಕೊಂಡು ಮಾಡುವಾಗುತ್ತದೆ ಎಂದು ಹೇಳುತ್ತೀರಿ. ಇದು 1961ರಿಂದಲೂ ಪಿ.ಡಬ್ಲ್ಯೂ.ಡಿ.ಗೆ ಸೇರಿರುವುದರಿಂದ ಇದೇ ವರ್ಷ ಈ ಕಾರ್ಯವನ್ನು ಪೂರ್ಣಗೊಳಿಸಿ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಸ್ತೆಗಳ ಪ್ರಗತಿ ಕೆಲಸವನ್ನು ಒಂದು ಫೇಸ್ಡ್ ಪ್ರೋಗ್ರಾಂ ನಲ್ಲಿ ಮಾಡಬೇಕಾಗಿದೆ. ಒಂದು ಕಡೆ ಎರಡ್ಮೂ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಕಷ್ಟವಾಗುತ್ತದೆ, ಕಾರಣ ಹಣದ ಅಭಾವ. ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಸಾಧ್ಯವಾದಷ್ಟೂ ಕೂಡ ಇವುಗಳನ್ನು ಉತ್ತಮ ಪಡಿಸಲಿಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಕೆ. ಯಂಕಟಪ್ಪ.— ತಾವು ಜೋರುಡಿ ಮಾರ್ಗದ ಬಗ್ಗೆ ಅದಾಯ ಇದೆಯೇ ಎಂದು ಕೇಳಿದ್ದಕ್ಕೆ ತಾವು ಗೊತ್ತಿಲ್ಲ ಎಂದು ಹೇಳಿದ್ದೀರಿ, ಇದರಲ್ಲಿ ವಾಹನಗಳು ಸಾಕಷ್ಟು ರೀತಿಯಲ್ಲಿ ಓಡಾಡುತ್ತಾ ಇರುವುದರಿಂದ ಸರ್ಕಾರಕ್ಕೆ ಇದರಿಂದ ಉತ್ಪನ್ನ ಬರುತ್ತದೆ. ದಯವಿಟ್ಟು ಫೇಸ್ಡ್ ಪ್ರೋಗ್ರಾಂ ಎಂದು ಏನು ಹೇಳುತ್ತೀರೋ ಅದರಲ್ಲಿ ಜೋರುಡಿ ಕಲ್ಮನೆ ರಸ್ತೆಯನ್ನು ಹಂತ ಹಂತವಾಗಿ ಮಾಡಿಸಿಕೊಡುತ್ತೇವೆ ಎನ್ನುವ ಭರವಸೆ ಕೊಡಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜೋರುಡಿ, ಕಲ್ಮನೆ ಮತ್ತು ಹಿರೇಕೊಪ್ಪ ಸಾಲೂರಿನ ರಸ್ತೆ ಎರಡು ರಸ್ತೆಗಳು ಕೆಟ್ಟಿರತಕ್ಕಂಥಾದ್ದು ಸರ್ಕಾರದ ಗಮನದಲ್ಲಿದೆ. ಇದರ ಬಗ್ಗೆ ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡುತ್ತೇವೆ.

ಶ್ರೀ ಬಿ. ಬೈರೆಗೌಡ.—ಪಿ.ಡಬ್ಲ್ಯೂ.ಡಿ. ರಸ್ತೆಗಳಿಗೆ ಕಲ್ಲು ಇಲ್ಲದ ಕಡೆ ಕಲ್ಲು, ಟಾರು ಇಲ್ಲದ ಕಡೆ ಟಾರು ಹಾಕುವ ಯೋಚನೆಯನ್ನು ರಾಜ್ಯದಾದ್ಯಂತ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಲ್ಲು ಇಲ್ಲದ ಕಡೆ ಕಲ್ಲು, ಟಾರು ಇಲ್ಲದ ಕಡೆ ಟಾರು ಹಾಕುವುದಕ್ಕೆ ಸಾಧ್ಯವಿಲ್ಲ, ಎಲ್ಲಿ ಅವಶ್ಯಕತೆ ಇದೆ ಎಂದು ನೋಡಿಕೊಂಡು ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ಮಾಡುತ್ತೇವೆ. ತಾವು ಹೇಳುವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ.

Constitution of Coconut Development Council

706. Sri B. BYRAPPAJI (Tusuvekere).—

Will the Minister for Agriculture and Forests be pleased to state:—

(*a*) whether the Government propose to constitute a coconut Development Council ;

(*b*) if so, the salient features and programmes of the same?

Sri K. H. PATIL (Minister for Agriculture and Forests).—

(*a*) No.

(*b*) Does not arise.

ಶ್ರೀ ಬಿ. ಬೈರಪ್ಪಾಜಿ.— ನಮ್ಮ ದೇಶದಲ್ಲಿ ಕಾಫಿ ಬೋರ್ಡು ಮಂಡಲ ಇದೆ, ಏಲಕ್ಕಿ ಅಭಿವೃದ್ಧಿ ಮಂಡಲ ಇದೆ, ಆದರೆ ತಾವು ತೆಂಗು ಅಭಿವೃದ್ಧಿ ಮಂಡಲಯನ್ನು ರಚಿಸುವುದಕ್ಕೆ ಸಿದ್ಧವಾಗಿಲ್ಲ ಎಂದು ಹೇಳಿದ್ದೀರಿ, ಲಕ್ಷಾಂತರ ಎಕರೆಯಲ್ಲಿ ತೆಂಗನ್ನು ಬೆಳೆಯಬೇಕು ಎಂದು ಹೊರಟಿರತಕ್ಕ ರೈತರ ಹಿತದೃಷ್ಟಿಯಿಂದ ತೆಂಗಿನ ಬೋರ್ಡು ಒಂದನ್ನು ರಚಿಸುವುದು ಸೂಕ್ತವಲ್ಲವೇ ?

† ಶ್ರೀ ಕೆ. ಎಚ್. ಪಾಟೀರ್.—ಸರ್ಕಾರದ ಉದ್ದೇಶವನ್ನು ಅಲ್ಲ ನಮೂದು ಮಾಡಿದ್ದೇವೆ. ಮಾನ್ಯ ಸದಸ್ಯರು ಇಚ್ಛೆ ಪಡುವುದಾದರೆ, ಒಂದು ಉಪದೇಶಿಕ ಮಂಡಲಯನ್ನು ನೇಮಿಸುವುದಕ್ಕೆ ಪ್ರಯತ್ನ ಪಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯದಲ್ಲಿ ಸಾವಿರಾರು ಜನ ಮಾತ್ರವಲ್ಲ, ಲಕ್ಷಾಂತರ ಜನ ತೆಂಗಿನ ಬೆಳೆಯನ್ನು ಅವಲಂಬಿಸಿದ್ದಾರೆ. ತೆಂಗಿನ ಬೋರ್ಡಿನಿಂದ ನಾನಾ ರೂಪದಲ್ಲಿ ಪ್ರಗತಿಯನ್ನು ಹೊಂದುವುದಕ್ಕೆ ಸಾಧ್ಯವಿದೆ. ಆದ್ದರಿಂದ ಇಂಥ ಒಂದು ಬೋರ್ಡು ಅವಶ್ಯಕ, ಇದನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ರಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇದನ್ನು ಪರಿಶೀಲಿಸೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ, ಕೋಕೊನೆಟ್ ಬೋರ್ಡು ಬಗ್ಗೆ ಹತ್ತಾರು ವರ್ಷಗಳಿಂದ ತೆಂಗಿನ ಬೆಳೆಗಾರರು ಸರ್ಕಾರದಲ್ಲಿ ಒಂದಲ್ಲ ಒಂದು ವಿಧದಲ್ಲಿ, ಮೇಲಿಂದ ಮೇಲೆ ನಿವೇದನೆ ಮಾಡುತ್ತಾ ಬಂದಿದ್ದಾರೆ. ತೆಂಗಿನ ಬೆಳೆಯ ಅಭಿವೃದ್ಧಿಗೆ ಅಗ್ರಿಕಲ್ಚರ್ ರಿಫೈನಾನ್ಸ್ ಕಾರ್ಪೋರೇಷನ್ ನವರು ಹಣ ಕೊಡುತ್ತಾರೆ. ತೆಂಗಿನ ಬೆಳೆ ಸಾಫಲ್ಯವಾಗಬೇಕಾದರೆ ಇಂಥ ಒಂದು ಬೋರ್ಡು ಅವಶ್ಯಕ. ತೆಂಗಿನ ಬೆಳೆಗಾರರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಬೋರ್ಡನ್ನು ರಚನೆ ಮಾಡುವುದಕ್ಕೋಸ್ಕರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಮೊದಲೇ ಹೇಳಿದ ಉತ್ತರವನ್ನು ಮಾನ್ಯ ಸದಸ್ಯರಿಗೂ ಹೇಳಬಯಸುತ್ತೇನೆ.

ಶ್ರೀ ಕೆ. ಯಂಕಟಪ್ಪ.—ತೆಂಗಿನ ಬೆಳೆಗೆ ಸಾಲವನ್ನು ಕೋ ಆಪರೇಟೀವ್ ಲ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕಿನವರು ಕೊಡುತ್ತಾರೆ. ಅದನ್ನು ಕೊಡಬೇಕಾದರೆ ಇಷ್ಟು ಭೂಮಿ ಆಧಾರ ಇರಬೇಕು ಎಂದು ಅದರಲ್ಲಿ ನಿಗಧಿ ಮಾಡಿದ್ದಾರೆ. ಆ ನಿಗಧಿ ಇರುವುದರಿಂದ ಒಂದು ಎಕರೆ, ಅಥವಾ ಎರಡು ಎಕರೆ ಇರುವ ತೆಂಗಿನ ಬೆಳೆಗಾರರಿಗೆ ಸಾಲದ ಸೌಲಭ್ಯ ದೊರೆಯುತ್ತಾ ಇಲ್ಲ. ಆದ್ದರಿಂದ ಎರಡು ಎಕರೆ ತೆಂಗಿನ ತೋಟ ಇರುವವರಿಗೂ ಸಾಲ ಕೊಡುವ ರೀತಿಯಲ್ಲಿ ವ್ಯವಸ್ಥೆಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಪ್ರಶ್ನೆ ಉದ್ಭವಿಸುವುದಿಲ್ಲ, ಮಾನ್ಯ ಸದಸ್ಯರು ಹೇಳಿದ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಂಡು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ

1-30 P.M.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ಈ ದೇಶದಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆ ತೆಂಗು ಬೆಳೆಯುತ್ತಿದ್ದಾರೆ ಮತ್ತೆ ತೆಂಗಿನ ಬೆಳೆಯ ವ್ಯವಸಾಯಗಾರರು ಎಷ್ಟು ಎಕರೆಯಲ್ಲಿ ಬೆಳೆಯುವುದಕ್ಕೆ ಸಿದ್ಧರಾಗಿದ್ದಾರೆ ಎನ್ನುವ ಅಂಕಿಅಂಶಗಳನ್ನು ಆದಷ್ಟು ಬೇಗ ತಯಾರುಮಾಡುವುದಕ್ಕೆ ಸೂಕ್ತ ನಿರ್ದೇಶನವನ್ನು ನೀಡಿ ತನ್ಮೂಲಕ ಬೋರ್ಡ್ ರಚನೆ ಆಗುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಈಗಾಗಲೇ ಅಗ್ರಿಕರ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಅಂಕಿಸಂಖ್ಯೆಗಳು ಇವೆ, ಮಾನ್ಯ ಸದಸ್ಯರು ಕೇಳಿದ್ದರೆ ಒದಗಿಸಬಹುದಿತ್ತು. ಆದರೂ ಸಹ ಬೋರ್ಡ್ ರಚನೆ ಮಾಡಬೇಕು ಎಂದು ಸಭೆಯಲ್ಲಿ ಅಭಿಪ್ರಾಯ ಇದೆ ಅದನ್ನು ಗಮನಕ್ಕೆ ತೆಗೆದುಕೊಂಡು ಬೋರ್ಡ್ ರಚನೆ ಮಾಡುವುದಕ್ಕೆ ತೀವ್ರ ಕ್ರಮ ಕೈಗೊಳ್ಳುತ್ತೇವೆ.

Leasing of Land for Removal of Sand

707. Sri B. BYRAPPAJI (Turuvekere).—

Will the Minister for Industries be pleased to state :—

(*a*) whether it is a fact that the Mines and Geology Department has granted on long term lease the gomal lands of Hapala village in Turuvekere Taluk for removing the sand ;